# 1957ರ ಕರ್ನಾಟಕ ಅಧಿನಿಯಮ ಸಂಖ್ಯೆ 4

# ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) ಅಧಿನಿಯಮ, 1956

(ಕರ್ನಾಟಕ ರಾಜ್ಯಪತ್ರ, ಗುರುವಾರ ಮೇ 22, 2003 ಭಾಗ-4ಎ ಪುಟ 493 ರಿಂದ 496ರವರೆಗೆ ಪ್ರಕಟಿಸಲಾಗಿದೆ)

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:**

1. ಚಿಕ್ಕ ಹೆಸರು.
2. ಪರಿಭಾಷೆಗಳು.
3. ಕೆಲವು ಅನರ್ಹತೆಗಳನ್ನು ತೆಗೆದುಹಾಕುವುದು.

ಅಧಿಸೂಚನೆ.

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

I

**1957ರ ಅಧಿನಿಯಮ 4.–** ಭಾರತ ಸರ್ಕಾರವು ವಿಮಾ ವ್ಯವಹಾರವನ್ನು ವಹಿಸಿಕೊಂಡ ಪರಿಣಾಮವಾಗಿ, ಯಾವ ಜೀವ ವಿಮಾ ಕಂಪನಿಗಳ ವ್ಯವಹಾರವನ್ನು ವಹಿಸಿಕೊಳ್ಳಲಾಗಿದೆಯೋ ಆ ಪೈಕಿ ಯಾವುದೇ ವಿಮಾ ಕಂಪನಿಯಲ್ಲಿ ಲಾಭದ ಹುದ್ದೆಯನ್ನು ಧಾರಣ ಮಾಡಿರುವ ವಿಧಾನ ಮಂಡಲದ ಯಾವುದೇ ಸದಸ್ಯನು, ರಾಜ್ಯ ವಿಧಾನ ಮಂಡಲದ ಸದಸ್ಯತ್ವಕ್ಕೆ ಸಂಬಂಧಿಸಿದಂತೆ ಅನರ್ಹತೆಗಳಿಗೆ ಗುರಿಯಾಗುತ್ತಾನೆ. ಅಂಥವೇ ಲಾಭದಾಯಕ ಹುದ್ದೆ ಹೊಂದಿರುವಂಥ ಸಂಸತ್ ಸದಸ್ಯರಿಗೆ ಸಂಬಂಧಪಟ್ಟಂತೆ ಅನರ್ಹತೆಯನ್ನು ವಿಮಾ (ತುರ್ತು ಉಪಬಂಧಗಳು) ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 9) 15ನೇ ಪ್ರಕರಣದ ಮೂಲಕ ತೆಗೆದುಹಾಕಲಾಗಿದೆ ಮತ್ತು ಭಾರತ ಸರ್ಕಾರವು ಈ ಉಪಬಂಧದ ಬಗ್ಗೆ ರಾಜ್ಯ ಸರ್ಕಾರದ ಗಮನವನ್ನು ಸೆಳೆದಿದೆ ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳ ಸಂದರ್ಭದಲ್ಲಿ ಅನುಕೂಲವಾಗುವ ಹಾಗೆ ಅಂಥದೇ ಕಾನೂನನ್ನು ಅಧಿನಿಯಮಿಸುವ ವಿಷಯವನ್ನು ಪರಿಶೀಲಿಸುವಂತೆ ಸಲಹೆ ಮಾಡಿದೆ. ರಾಜ್ಯದಲ್ಲಿ ಅಂಥದೇ ಕಾನೂನು ಅಧಿನಿಯಮಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 18.09.1956ರ ಮೈಸೂರು ರಾಜಪತ್ರ (ವಿಶೇಷ ಸಂಚಿಕೆ) ಪುಟ 2ರಲ್ಲಿ ಪ್ರಕಟಿಸಲಾಗಿದೆ).

**II**

**1962ರ ತಿದ್ದುಪಡಿ ಮಾಡುವ ಅಧಿನಿಯಮ 35.–** ಪ್ರಸ್ತುತ ಗೃಹರಕ್ಷಕ ದಳ ಸಂಸ್ಥೆಯು, ರಾಜ್ಯದ ಮುಂಬಯಿ- ಕರ್ನಾಟಕ ಜಿಲ್ಲೆಗಳಲ್ಲಿ ಮಾತ್ರ ಅಸ್ತಿತ್ವದಲ್ಲಿದೆ. ಈಗಿನ ತುರ್ತು ಪರಿಸ್ಥಿತಿಯ ಕಾರಣದಿಂದ, ವ್ಯಕ್ತಿಗಳ ರಕ್ಷಣೆ, ಆಸ್ತಿಗಳ ಭದ್ರತೆ ಮತ್ತು ತುರ್ತು ಪರಿಸ್ಥಿತಿಯಲ್ಲಿ ಸಾರ್ವಜನಿಕ ಸುವ್ಯವಸ್ಥೆಯ ಪರಿರಕ್ಷಣೆಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸಲು ರಾಜ್ಯದಾದ್ಯಂತ ವ್ಯಕ್ತಿಗಳನ್ನು ಒಳಗೊಂಡ ಸ್ವಯಂ ಸೇವಕ ಸಂಸ್ಥೆಯು ಅವಶ್ಯಕವಾಗಿದೆ ಎಂದು ಪರಿಗಣಿಸಲಾಗಿದೆ. ಆದಕಾರಣ, ಇಡೀ ರಾಜ್ಯದಲ್ಲಿ ಗೃಹರಕ್ಷಕ ದಳಗಳನ್ನು ಸಂಘಟಿಸಲು ಪ್ರಸ್ತಾಪಿಸಲಾಗಿದೆ. ಸಂಘಟನೆಯ ಪರಿಣಾಮಕಾರಿ ನಿಯಂತ್ರಣ ಮತ್ತು ಆಡಳಿತ ನಿರ್ವಹಣೆಗೆ ಏಕರೂಪದ ಕಾನೂನು ತರುವುದು ಅವಶ್ಯಕವಾಗಿದೆ. ತುರ್ತು ಸಂದರ್ಭ ಇರುವುದರಿಂದ ಮತ್ತು ವಿಧಾನ ಮಂಡಲವು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೈಸೂರು ಗೃಹ ರಕ್ಷಕ ಅಧ್ಯಾದೇಶ, 1962 - ಇದನ್ನು ಹೊರಡಿಸಲಾಗಿತ್ತು. ಪ್ರಸ್ತುತ ವಿಧೇಯಕವನ್ನು ಸದರಿ ಅಧ್ಯಾದೇಶಕ್ಕೆ ಬದಲಾಗಿ ಮಂಡಿಸಲು ಉದ್ದೇಶಿಸಲಾಗಿದೆ.

ನಿರಸನ ಮತ್ತು ಉಳಿಸುವಿಕೆಗೆ ಸಂಬಂಧಿಸಿದ ಎರಡು ಖಂಡಗಳು ಮತ್ತು ಅಧಿನಿಯಮದ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ವಿಧಾನ ಮಂಡಲದ ಮುಂದೆ ಮಂಡಿಸಲು ಇರುವ ಉಪಬಂಧವೊಂದರ ಸೇರ್ಪಡೆ ಹೊರತಾಗಿ, ಇತರ ವಿಷಯಗಳಲ್ಲಿ ವಿಧೇಯಕದ ಉಪಬಂಧಗಳು ಅಧ್ಯಾದೇಶದ ಉಪಬಂಧಗಳಿಗೆ ತದ್ರೂಪವಾಗಿವೆ.

(ದಿನಾಂಕ 1-12-1962ರ ಸಂಖ್ಯೆ 238 ರಲ್ಲಿರುವಂತೆ ಭಾಗ IV- 2ಎ ಮೈಸೂರು ರಾಜಪತ್ರ (ವಿಶೇಷ ಸಂಚಿಕೆ)ಯಲ್ಲಿ ಪ್ರಕಟಗೊಂಡಿದೆ).

## III

**1964ರ ತಿದ್ದುಪಡಿ ಮಾಡುವ ಅಧಿನಿಯಮ 34.**-ಗ್ರಾಮ ರಕ್ಷಣಾ ಪಡೆಗಳು ಮುಂಬಯಿ ಪ್ರದೇಶದ ನಾಲ್ಕು ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿವೆ. ಈ ಪಡೆಗಳು ದೃಢಕಾಯವುಳ್ಳ ಗ್ರಾಮಸ್ಥರನ್ನು ಒಳಗೊಂಡ ಸ್ವಯಂ ಸೇವಾ ಸಂಘಟನೆಗಳಾಗಿದ್ದು ಡಕಾಯಿತರು ಮತ್ತು ಬೇರೆ ರೀತಿಯ ಅಪರಾಧಗಳ ಲೂಟಿಯ ವಿರುದ್ಧ, ಗ್ರಾಮಗಳನ್ನು ರಕ್ಷಿಸುವ ಉದ್ದೇಶ ಹೊಂದಿವೆ. ಈ ಪಡೆಗಳು ಮುಂಬಯಿ ಪೊಲೀಸು ಅಧಿನಿಯಮ, 1951ರ ಅಡಿಯಲ್ಲಿ ರಚನೆಗೊಂಡಿವೆ.

(2) ಪ್ರಸ್ತುತ ರಾಷ್ಟ್ರೀಯ ತುರ್ತು ಪರಿಸ್ಥಿತಿಯಲ್ಲಿ ಪೊಲೀಸರು ಪ್ರಮುಖ ಕರ್ತವ್ಯಗಳಲ್ಲಿ ತೊಡಗಿರುವಾಗ ಗ್ರಾಮಗಳ ರಕ್ಷಣೆ, ವ್ಯಕ್ತಿಗಳ ಮತ್ತು ಆಸ್ತಿಗಳ ಸಂರಕ್ಷಣೆ ಮತ್ತು ಸಾರ್ವಜನಿಕ ಸುವ್ಯವಸ್ಥೆ ಮತ್ತು ಸಾರ್ವಜನಿಕ ಶಾಂತಿಯ ಪರಿರಕ್ಷಣೆ- ಇವುಗಳ ಸಲುವಾಗಿ ರಾಜ್ಯದಾದ್ಯಂತ ಗ್ರಾಮ ರಕ್ಷಣಾ ಪಡೆಗಳನ್ನು ಸಂಘಟಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಮೈಸೂರು ಗೃಹ ರಕ್ಷಕ ದಳ ಅಧಿನಿಯಮ, 1962, ಗೃಹ ರಕ್ಷಣಾ ಪಡೆಗಳನ್ನು ರಚಿಸುವುದಕ್ಕೆ ಅವಕಾಶ ಕಲ್ಪಿಸುತ್ತದೆ. ಗೃಹ ರಕ್ಷಣಾ ಪಡೆಗಳನ್ನು ಸಾಮಾನ್ಯವಾಗಿ ನಗರ ಪ್ರದೇಶಗಳಿಗಾಗಿ ನೇಮಕ ಮಾಡಲಾಗುತ್ತದೆ. ಗ್ರಾಮ ರಕ್ಷಣಾ ಪಡೆಗಳು ಹಳ್ಳಿಗಳ ಸಲುವಾಗಿ ಇರುತ್ತವೆ. ರಾಜ್ಯದಾದ್ಯಂತ ಗ್ರಾಮ ರಕ್ಷಣಾ ಪಡೆಗಳನ್ನು ರಚಿಸಬೇಕಾದರೆ ಏಕರೂಪದ ಕಾನೂನನ್ನು ಅಧಿನಿಯಮಿಸಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 23-1-1964ರ ಎಲ್-ಎ ವಿಧೇಯಕ ಸಂಖ್ಯೆ. 11087 ರಿಂದ ಪಡೆಯಲಾಗಿದೆ).

## IV

**1989ರ ತಿದ್ದುಪಡಿ ಮಾಡುವ ಅಧಿನಿಯಮ 22.**- ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿ ಅಧಿನಿಯಮ, 1983 (1985ರ ಕರ್ನಾಟಕ ಅಧಿನಿಯಮ 20)ರ ಅಡಿಯಲ್ಲಿ ರಚಿತವಾದ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳನ್ನು ಅನರ್ಹಗೊಳಿಸತಕ್ಕುದಲ್ಲ ಮತ್ತು ಒಬ್ಬ ವ್ಯಕ್ತಿಯನ್ನು ಕರ್ನಾಟಕ ವಿಧಾನಸಭೆಯ ಅಥವಾ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾಗುವುದಕ್ಕೆ ಅಥವಾ ಸದಸ್ಯರಾಗಿ ಇರುವುದಕ್ಕೆ ಎಂದೂ ಅನರ್ಹಗೊಳಿಸುವುದಾಗಿ ಭಾವಿಸತಕ್ಕುದಲ್ಲವೆಂದು ಘೋಷಿಸಲು ಕರ್ನಾಟಕ ವಿಧಾನಮಂಡಲ (ಅನರ್ಹತಾ ಪ್ರತಿಬಂಧ) ಅಧಿನಿಯಮ, 1956ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಮೇಲಿನ ಉದ್ದೇಶಕ್ಕಾಗಿ 1989ರ ಅಧ್ಯಾದೇಶ ಸಂಖ್ಯೆ. 2ನ್ನು ಹೊರಡಿಸಲಾಯಿತು.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಾಗಿ ಮಂಡಿಸಲು ಉದ್ದೇಶಿಸಲಾಗಿದೆ.

(ಕರ್ನಾಟಕ ರಾಜಪತ್ರದ (ವಿಶೇಷ ಸಂಚಿಕೆ) ಭಾಗ IV - 2ಎ, ದಿನಾಂಕ 23ನೇ ಮಾರ್ಚ್, 1989 ರಂದು ಪುಟ 3 ರಲ್ಲಿ ಸಂಖ್ಯೆ. 159 ರಲ್ಲಿ ಪ್ರಕಟಿಸಲಾಗಿದೆ).

## V

**1991ರ ತಿದ್ದುಪಡಿ ಮಾಡುವ ಅಧಿನಿಯಮ 20.**- ಮಂಡಲ ಪಂಚಾಯಿತಿಗಳ ಪ್ರಧಾನ ಮತ್ತು ಉಪಪ್ರಧಾನರು ಕ್ರಮವಾಗಿ 300 ರೂ.ಗಳ ಮತ್ತು 150 ರೂ.ಗಳ ಮಾಸಿಕ ವೇತನ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

ಭಾರತ ಸಂವಿಧಾನದ 131ನೇ ಅನುಚ್ಛೇದದ (1)ನೇ ಖಂಡದ (ಎ) ಉಪ ಖಂಡದ ಮೇರೆಗೆ, ರಾಜ್ಯದ ಅಧೀನದಲ್ಲಿ ಲಾಭದ ಹುದ್ದೆಗಳನ್ನು ಧಾರಣ ಮಾಡಿರುವ ವ್ಯಕ್ತಿಗಳು ರಾಜ್ಯ ವಿಧಾನಮಂಡಲದ ಸದಸ್ಯರಾಗಿ ಆಯ್ಕೆಯಾಗಲು ಅಥವಾ ಸದಸ್ಯರಾಗದಂತೆ ಅಥವಾ ಸದಸ್ಯರಾಗಿ ಮುಂದುವರೆಯದಂತೆ ಆ ಹುದ್ದೆಗಳ ಮೂಲಕ

ಅನರ್ಹಗೊಳ್ಳತಕ್ಕದ್ದಲ್ಲವೆಂದು ರಾಜ್ಯ ವಿಧಾನ ಮಂಡಲವು ಕಾನೂನು ಮೂಲಕ ಘೋಷಿಸುವ ಹೊರತು, ಅವರು ಹಾಗೆ ಸದಸ್ಯರಾಗಲು ಅಥವಾ ಸದಸ್ಯರಾಗಿ ಮುಂದುವರೆಯಲು ಅನರ್ಹರಾಗುತ್ತಾರೆ.

ಜಿಲ್ಲಾ ಪರಿಷತ್ತುಗಳ ಅಧ್ಯಕ್ಷ ಅಥವಾ ಉಪಾಧ್ಯಕ್ಷರು ಹೊಂದಿರುವ ಹುದ್ದೆಯಿಂದ ಉದ್ಭವಿಸಿದಂಥ ಅನರ್ಹತೆಯನ್ನು ನಿವಾರಿಸಲು ಈ ಹಿಂದೆ ಕರ್ನಾಟಕ ವಿಧಾನಮಂಡಲ (ಅನರ್ಹತಾ ಪ್ರತಿಬಂಧ) ಅಧಿನಿಯಮ, 1956ನ್ನು ತಿದ್ದುಪಡಿ ಮಾಡಲಾಗಿತ್ತು. ಆದಾಗ್ಯೂ, ಪ್ರಧಾನ ಮತ್ತು ಉಪ ಪ್ರಧಾನರ ಹುದ್ದೆಗಳು ಸದರಿ ತಿದ್ದುಪಡಿಗೆ ಒಳಪಟ್ಟಿರಲಿಲ್ಲ.

ಪ್ರಧಾನ ಮತ್ತು ಉಪ ಪ್ರಧಾನರ ಹುದ್ದೆಗಳನ್ನು ಸೇರಿಸಲು ಹಿಂದೆ ಹೇಳಿದ ಅಧಿನಿಯಮವನ್ನು ತಿದ್ದುಪಡಿ ಮಾಡಲು ಮತ್ತು ಅದರ ಮೂಲಕ ರಾಜ್ಯ ವಿಧಾನಮಂಡಲದ ಸದಸ್ಯರಾಗಿ ಆಯ್ಕೆಯಾಗುವುದಕ್ಕೆ ಅಥವಾ ಮುಂದುವರಿಯುವುದಕ್ಕೆ ಅಂಥ ಹುದ್ದೆಗಳನ್ನು ಹೊಂದಿರುವುದು ಅನರ್ಹತೆಗೆ ಕಾರಣವಾಗುವುದಿಲ್ಲ ಎಂಬ ಉಪಬಂಧ ಕಲ್ಪಿಸಲು ಈಗ ಪ್ರಸ್ತಾವಿಸಲಾಗಿದೆ.

(ಕರ್ನಾಟಕ ರಾಜಪತ್ರದ (ವಿಶೇಷ ಸಂಚಿಕೆ) ಭಾಗ - IV 2ಎ, ದಿನಾಂಕ 7ನೇ ಮಾರ್ಚ್, 1991 ರಂದು ಪುಟ 177 ರಲ್ಲಿ ಸಂಖ್ಯೆ. 91 ರಲ್ಲಿ ಪ್ರಕಟಿಸಲಾಗಿದೆ).

## VI

**2000ದ ಅಧಿನಿಯಮ 22.– ಟಿಪ್ಪಣಿ.–** ಈ ಅದಿನಿಯಮದಿಂದ ಚಾಲ್ತಿಯಲ್ಲಿಲ್ಲದ ಮತ್ತು ರೂಢಿ ತಪ್ಪಿದ ಕೆಲವು ಕಾನೂನುಗಳನ್ನು ನಿರಸನಗೊಳಿಸಲಾಗಿದೆ. ಹಾಗೆ ಮಾಡುವಲ್ಲಿ ಈ ಅಧಿನಿಯಮಗಳು ಮತ್ತು ಇತರ ಕೆಲವು ಅಧಿನಿಯಮಗಳಿಗೆ ಕೆಲವೊಂದು ಸಣ್ಣಪುಟ್ಟ ತಿದ್ದುಪಡಿಗಳನ್ನು ಮಾಡಲಾಗಿದೆ.

* * * *

# 1957ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 4

(1957ರ ಜನವರಿ ಇಪ್ಪತ್ತನಾಲ್ಕನೇ ದಿನದಂದು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಮೊದಲು ಪ್ರಕಟಿಸಲಾಯಿತು.)

## [1][ಕರ್ನಾಟಕ ವಿಧಾನ ಮಂಡಲ][1] (ಅನರ್ಹತಾ ನಿವಾರಣಾ) ಅಧಿನಿಯಮ, 1956

(ಕರ್ನಾಟಕ ಅಧಿನಿಯಮ, 1962ರ 35, 1964ರ 34, 1976ರ 72, 1989ರ 22, 1991ರ 20 ಮತ್ತು 2000ದ 22ರ ಮೂಲಕ ತಿದ್ದುಪಡಿ ಮಾಡಲಾದಂತೆ)

(1957ರ ಜನವರಿ ಹದಿನೈದನೇ ದಿನದಂದು ರಾಜ್ಯಪಾಲರ ಒಪ್ಪಿಗೆಯನ್ನು ಪಡೆಯಲಾಗಿದೆ)

ಕೆಲವು ಲಾಭದಾಯಕ ಹುದ್ದೆಗಳು, ಅವುಗಳನ್ನು ಹೊಂದಿರುವ ವ್ಯಕ್ತಿಗಳನ್ನು [1][ಕರ್ನಾಟಕ ವಿಧಾನ ಸಭೆ][1] ಮತ್ತು [1][ಕರ್ನಾಟಕ ವಿಧಾನ ಪರಿಷತ್ತಿನ][1] ಸದಸ್ಯರೆಂದು ಆಯ್ಕೆಗೊಳ್ಳುವುದಕ್ಕೆ ಅಥವಾ ಅವುಗಳ ಸದಸ್ಯರಾಗಿರುವುದಕ್ಕೆ ಅನರ್ಹಗೊಳಿಸತಕ್ಕುದಲ್ಲವೆಂದು ಘೋಷಿಸುವ ಅಧಿನಿಯಮ.

ಕೆಲವು ಹುದ್ದೆಗಳು, ಕೆಲವು ಸಂದರ್ಭಗಳಲ್ಲಿ ಅವುಗಳನ್ನು ಹೊಂದಿರುವ ವ್ಯಕ್ತಿಗಳನ್ನು [1][ಕರ್ನಾಟಕ ವಿಧಾನ ಸಭೆ][1] ಮತ್ತು [1][ಕರ್ನಾಟಕ ವಿಧಾನ ಪರಿಷತ್ತಿನ][1] ಸದಸ್ಯರಾಗಿ ಇರುವುದಕ್ಕೆ ಅಥವಾ ಆಯ್ಕೆಯಾಗುವುದಕ್ಕೆ ಅನರ್ಹಗೊಳಿಸತಕ್ಕುದಲ್ಲ ಅಥವಾ ಅನರ್ಹಗೊಳಿಸುವುದಾಗಿ ಭಾವಿಸತಕ್ಕುದಲ್ಲವೆಂದು ಘೋಷಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಏಳನೇ ವರ್ಷದಲ್ಲಿ, [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಇದು ಈ ಮುಂದಿನಂತೆ ಅಧಿನಿಯಮಿತವಾಗತಕ್ಕುದು:-

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**1. ಚಿಕ್ಕ ಹೆಸರು.-** ಈ ಅಧಿನಿಯಮವನ್ನು [1][ಕರ್ನಾಟಕ ವಿಧಾನ ಮಂಡಲ][1] (ಅನರ್ಹತಾ ನಿವಾರಣಾ) ಅಧಿನಿಯಮ, 1956 ಎಂದು ಕರೆಯತಕ್ಕುದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸಮಿತಿ" ಎಂದರೆ, ಭಾರತ ಸರ್ಕಾರ ಅಥವಾ ಯಾವುದೇ ರಾಜ್ಯದ ಸರ್ಕಾರವು ಸ್ಥಾಪಿಸಿದ, ಅದು ಶಾಸನಬದ್ಧವಾದುದಾಗಿರಲಿ ಅಥವಾ ಇಲ್ಲದಿರಲಿ, ಒಬ್ಬ ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳನ್ನುಳ್ಳ ಯಾವುದೇ ಸಮಿತಿ, ಆಯೋಗ, ಪರಿಷತ್ತು, ಮಂಡಲಿ ಅಥವಾ ಯಾವುದೇ ಇತರೆ ನಿಕಾಯ;

(ಬಿ) "ಪರಿಹಾರ ಭತ್ಯೆ" ಎಂದರೆ, ಸಂದರ್ಭಾನುಸಾರ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯದ ಸರ್ಕಾರವು, ಸಮಿತಿಯ ಅಧ್ಯಕ್ಷ ಅಥವಾ ಅದರ ಇತರ ಯಾರೇ ಸದಸ್ಯನಿಗೆ, ಅವನು ಸಮಿತಿಯ ಯಾವುದೇ ಸಭೆಗೆ ಹಾಜರಾಗಲು ಅಥವಾ ಸಮಿತಿಯ ಸದಸ್ಯನಾಗಿ ಯಾವುದೇ ಇತರೆ ಪ್ರಕಾರ್ಯವನ್ನು ನೆರವೇರಿಸಲು ವಹಿಸಿದ ಯಾವುದೇ ವೆಚ್ಚವನ್ನು ಮರುಭರ್ತಿ ಮಾಡಿಕೊಳ್ಳಲು ಅವನನ್ನು ಶಕ್ತಗೊಳಿಸುವ ಉದ್ದೇಶಕ್ಕಾಗಿ ಪ್ರಯಾಣ ಭತ್ಯೆ, ದಿನ ಭತ್ಯೆ, ಉಪವೇಶನ ಶುಲ್ಕ, ವಾಹನ ಭತ್ಯೆ ಅಥವಾ ಮನೆ ಬಾಡಿಗೆ ಭತ್ಯೆದ ರೂಪದಲ್ಲಿ ಅವನಿಗೆ ಸಂದಾಯ ಮಾಡಲಾಗಿದೆಯೆಂದು ನಿರ್ಧರಿಸಬಹುದಾದಂಥ ಹಣದ ಮೊತ್ತ;

(ಸಿ) "ಶಾಸನಬದ್ಧ ನಿಕಾಯ " ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕೇಂದ್ರ ಕಾನೂನು ಅಥವಾ ಯಾವುದೇ ರಾಜ್ಯದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ, ನೋಂದಾಯಿತವಾದ ಅಥವಾ ರೂಪಿಸಲಾದ ಅಥವಾ ಯಾವುದೇ ಅಂಥ ಕಾನೂನಿನ ಮೇರೆಗೆ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಚಲಾಯಿಸುತ್ತಿರುವ ಒಬ್ಬ ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳುಳ್ಳ,

ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ, ಯಾವುದೇ ನಿಗಮ, ಮಂಡಲಿ, ಕಂಪನಿ, ಸಂಘ ಅಥವಾ ಯಾವುದೇ ಇತರೆ ನಿಕಾಯ.

**3. ಕೆಲವು ಅನರ್ಹತೆಗಳನ್ನು ತೆಗೆದುಹಾಕುವುದು.–** ಈ ಕೆಳಕಂಡ ಹುದ್ದೆಗಳು, ಅವುಗಳನ್ನು ಹೊಂದಿರುವ ವ್ಯಕ್ತಿಗಳನ್ನು [1][ಕರ್ನಾಟಕ ವಿಧಾನ ಸಭೆ][1] ಮತ್ತು [1][ಕರ್ನಾಟಕ ವಿಧಾನ ಪರಿಷತ್ತಿನ][1] ಸದಸ್ಯರಾಗಿ ಆಯ್ಕೆಗೊಳ್ಳಲು ಅಥವಾ ಅದರ ಸದಸ್ಯರಾಗಲು ಅನರ್ಹಗೊಳಿಸತಕ್ಕುದಲ್ಲ ಮತ್ತು ಎಂದೂ ಅನರ್ಹಗೊಳಿಸಿಲ್ಲವೆಂದು ಭಾವಿಸತಕ್ಕುದು ಎಂಬುದಾಗಿ ಈ ಮೂಲಕ ಘೋಷಿಸಲಾಗಿದೆ:–

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಎ) ಉಪ-ಮಂತ್ರಿ, ಸಂಸದೀಯ ಕಾರ್ಯದರ್ಶಿ, [1][ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರದ ಮುಖ್ಯ ಸಚೇತಕರು;] [1]

1. 1976ರ ಅಧಿನಿಯಮ ಸಂಖ್ಯೆ 72ರ ಮೂಲಕ 19–7–1976ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ರಾಷ್ಟ್ರೀಯ ಯುವ ಸೇನಾದಳ ಅಧಿನಿಯಮ, 1948 (1948ರ ಕೇಂದ್ರ ಅಧಿನಿಯಮ ಸಂಖ್ಯೆ XXXI)ರ ಮೇರೆಗೆ ರಚಿಸಲಾದ ಮತ್ತು ನಿರ್ವಹಿಸಿಕೊಂಡು ಬಂದಿರುವ ರಾಷ್ಟ್ರೀಯ ಯುವ ಸೇನಾ ದಳದಲ್ಲಿ, ಪ್ರಾದೇಶಿಕ ಸೇನಾ ಅಧಿನಿಯಮ, 1948(1948ರ ಕೇಂದ್ರ ಅಧಿನಿಯಮ ಸಂಖ್ಯೆ LVI)ರ ಮೇರೆಗೆ ರಚಿಸಲಾದ ಮತ್ತು ನಿರ್ವಹಿಸಿಕೊಂಡು ಬಂದಿರುವ ಪ್ರಾದೇಶಿಕ ಸೇವೆಯಲ್ಲಿ, ಮತ್ತು ಮೀಸಲು ಮತ್ತು ಸಹಾಯಕ ವಾಯು ಬಲಗಳ ಅಧಿನಿಯಮ, 1952(1952ರ ಕೇಂದ್ರ ಅಧಿನಿಯಮ ಸಂಖ್ಯೆ LXII)ರ ಮೇರೆಗೆ ಸಹಾಯಕ ವಾಯುಬಲ ಮತ್ತು ವಾಯು ರಕ್ಷಣಾ ಮೀಸಲು ಇವುಗಳಲ್ಲಿ ಧಾರಣ ಮಾಡಿರುವ ಹುದ್ದೆಗಳು;

[1][(ಬಿಬಿ) [2][ಕರ್ನಾಟಕ][2] ಗೃಹ ರಕ್ಷಕ ದಳ ಅಧಿನಿಯಮ, 1962ರ ಮೇರೆಗೆ ರಚಿಸಲಾದ ಗೃಹ ರಕ್ಷಕ ದಳದ ಸದಸ್ಯನ ಹುದ್ದೆ;][1]

1. 1962ರ ಅಧಿನಿಯಮ ಸಂಖ್ಯೆ 35ರ ಮೂಲಕ 27–12–1962ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][[2][(ಬಿಬಿಬಿ)][2] [3][ಕರ್ನಾಟಕ][3] ರಕ್ಷಣಾ ಪಡೆಗಳ ಅಧಿನಿಯಮ, 1964ರ ಮೇರೆಗೆ ರಚಿಸಲಾದ ಗ್ರಾಮ ರಕ್ಷಣಾ ಪಡೆಯ ಸದಸ್ಯನ ಹುದ್ದೆ;][1]

1. 1964ರ ಅಧಿನಿಯಮ ಸಂಖ್ಯೆ 34ರ ಮೂಲಕ 1–11–1965ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಸೇರಿಸಲಾಗಿದೆ.

2. 2000ದ ಅಧಿನಿಯಮ ಸಂಖ್ಯೆ 22ರ ಮೂಲಕ 1–11–1965ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ

3. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಸಿ) ರಾಜ್ಯ ಸರ್ಕಾರವು ರಚಿಸಿದ ಜಿಲ್ಲಾ ಅಭಿವೃದ್ಧಿ ಮಂಡಲಿಗಳ (ಅದನ್ನು ಯಾವುದೇ ಹೆಸರಿನಿಂದ ಕರೆಯಲಿ) ಕಾರ್ಯದರ್ಶಿಗಳ ಹುದ್ದೆ:

ಪರಂತು, ಅಂಥ ಹುದ್ದೆಯನ್ನು ಹೊಂದಿರುವ ವ್ಯಕ್ತಿಯು ರಾಜ್ಯ ಸರ್ಕಾರದ ಅಡಿಯಲ್ಲಿನ ಇತರೆ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರತಕ್ಕುದಲ್ಲ;

[1][(ಸಿಸಿ) ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಅಧಿನಿಯಮ, 1983(1985ರ ಕರ್ನಾಟಕ ಅಧಿನಿಯಮ ಸಂಖ್ಯೆ 20)ರ ಮೇರೆಗೆ ರಚಿಸಲಾದ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ [2][ಮತ್ತು ಮಂಡಲ ಪಂಚಾಯತಿಯ ಪ್ರಧಾನ ಹಾಗೂ ಉಪ-ಪ್ರಧಾನರ][2] ಹುದ್ದೆಗಳು;][1]

1. 1989ರ ಅಧಿನಿಯಮ ಸಂಖ್ಯೆ 22ರ ಮೂಲಕ 14–08–1985ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1991ರ ಅಧಿನಿಯಮ ಸಂಖ್ಯೆ 20ರ ಮೂಲಕ 14–08–1985ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಡಿ) ಒಂದು ಸಮಿತಿಯ ಅಧ್ಯಕ್ಷ ಅಥವಾ ಸದಸ್ಯನ ಹುದ್ದೆ:

ಪರಂತು, ಅಂಥ ಹುದ್ದೆಯನ್ನು ಹೊಂದಿರುವ ವ್ಯಕ್ತಿಯು ನಷ್ಟ ಪರಿಹಾರ ಭತ್ಯೆಯನ್ನು ಹೊರತುಪಡಿಸಿ ಯಾವುದೇ ಇತರೆ ಪರಿಶ್ರಮ ಧನವನ್ನು ಸ್ವೀಕರಿಸಿರಕೂಡದು ಅಥವಾ ಅದಕ್ಕೆ ಹಕ್ಕುಳ್ಳವನಾಗಿರಕೂಡದು.

**ಅಧಿಸೂಚನೆ**

**ಬೆಂಗಳೂರು, ದಿನಾಂಕ 16:18ನೇ ಆಕ್ಟೋಬರ್ 1965 [ಸಂಖ್ಯೆ ಎಚ್‌ಡಿ 354 ಪಿಇಜಿ 65]**

**ಎಸ್.ಓ. 3354.–** ಕರ್ನಾಟಕ ಗೃಹ ರಕ್ಷಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ ಸಂ. 34)ರ 1ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 1965ರ ನವೆಂಬರ್ 1ನೇ ದಿನವನ್ನು ಸದರಿ ಅಧಿನಿಯಮವು ಇಡೀ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬರತಕ್ಕ ದಿನಾಂಕವೆಂಬುದಾಗಿ ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಂ.ಎಸ್. ಶಂಕರರಾವ್**
ಕಾರ್ಯದರ್ಶಿ, ಗೃಹ ಇಲಾಖೆ

(ಕರ್ನಾಟಕ ರಾಜ್ಯಪತ್ರ ಭಾಗ-IV -2ಸಿ (ii), ದಿನಾಂಕ 28.10.1965ರ ಪುಟ 3160 ರಲ್ಲಿ ಪ್ರಕಟಿಸಲಾಗಿದೆ)

The above translation of the Karnataka Legislature (Prevention of disqualification) Act, 1956 (4 of 1957) shall be authoritative text in the Kannada Language under section 5A of the Karnataka Official Language Act, 1963 (Karnataka Act No. 26 of 1963)

Bangalore
Date:

**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಮ.ರಾ ಹೆಗಡೆ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

RKB